## ಜಿಪಂ ಸಿಇಓ ಸದಾಶಿವ ಪ್ರಭು ಬಿ ಮಾರ್ಗದರ್ಶನದಲ್ಲಿ ವಿಭಿನ್ನ ಕಾರ್ಯಕ್ರಮ

# ಲೋಕಸಭಾ ಚುನಾವಣೆ: ಹಂಪಿ ಜಾತ್ರೆಯಲ್ಲಿ ಮತದಾನ ಜಾಗೃತಿ



ಹೊಸಪೇಟೆ (ವಿಜಯನಗರ ಜಿಲ್ಲೆ) ಏಪ್ರೀಲ್ 23: ವಿಶ್ವವಿಖ್ಯಾತ ಹಂಪಿ ಜಾತ್ರೆಯಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಸ್ವೀಪ್ ಸಮಿತಿಯಿಂದ ಏಪ್ರೀಲ್ 23ರಂದು ಮತದಾನ ಜಾಗೃತಿ ಕಾರ್ಯಕ್ರಮಗಳು ವಿಭಿನ್ನವಾಗಿ ನಡೆದು ಗಮನ ಸೆಳೆದವು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ ಅವರ ಮಾರ್ಗದರ್ಶನದಲ್ಲಿ ವಿಶ್ವ ಪ್ರಸಿದ್ಧ ಪಾರಂಪರಿಕ ತಾಣದಲ್ಲಿ ನಡೆದ ಈ ವಿಶೇಷ ಸ್ವೀಪ್ ಚಟುವಟಿಕೆಗಳಿಂದ ಮತದಾನ ಜಾಗೃತಿಯ ಸಂದೇಶವನ್ನು ಸಾವಿರಾರು ಜನರಿಗೆ ಏಕಕಾಲಕ್ಕೆ ತಲುಪಿಸಲಾಯಿತು.

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಪಂಚಾಯತಿ ವಿಜಯನಗರ ಮತ್ತು ತಾಲೂಕ ಪಂಚಾಯತಿ, ತಾಲೂಕ ಸ್ವೀಪ್ ಸಮಿತಿ, ಹೊಸಪೇಟೆ ತಾಲೂಕಿನ ಹಂಪಿ ಗ್ರಾಮ ಪಂಚಾಯಿತಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಹಿನ್ನೆಲೆಯಲ್ಲಿ ಹಂಪಿ ವಿರೂಪಾಕ್ಷ ದೇವಸ್ಥಾನ ಮುಂಭಾಗದಲ್ಲಿ ಮತದಾರರ ಜಾಗೃತಿ ಅಭಿಯಾನಕ್ಕೆ ಜಿಲ್ಲಾ ಪಂಚಾಯತ್‌ನ ಸಿಇಓ ಅವರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು.ಗ್ರಾಮೀಣ ಭಾಗದ ವಿವಿಧ ಸಂಘದ ಪದಾಧಿಕಾರಿಗಳು ತೇರು ಬೀದಿಯಲ್ಲಿ ಮತದಾನ ಜಾಗೃತಿ ಮೂಡಿಸುವ ವಿವಿಧ ಫ್ಲೆಕ್ಸ್ ಬ್ಯಾನರ್‌ಗಳನ್ನು ಪ್ರದರ್ಶಿಸಿದರು. ತೇರು ಬೀದಿಯಲ್ಲಿ ಸುಮಾರು 200 ಮೀಟರ್ ಉದ್ದಕ್ಕೂ ರಂಗೋಲಿಗಳನ್ನು ಬಿಡಿಸಿ ಮತದಾನ ಜಾಗೃತಿ ಜಾಥಾ ನಡೆಸಲಾಯಿತು. ಸಂಜಿವೀನಿ-ಸ್ವ ಸಹಾಯ ಸಂಘದ ಸದಸ್ಯರುಗಳಿಗೆ ಮತದಾರರ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಕೋಲಾಟ ಹಾಗು ವಿವಿಧ ಜಾನಪದ ಡೊಳ್ಳು ಕುಣಿತದೊಂದಿಗೆ ಜನಪದ ಕಲಾವಿದರ ಮೂಲಕ ಜನಪದ ಕಲಾ ನೃತ್ಯಗಳ ಮೂಲಕ ಜಾಥಾ ನಡೆಯಿತು. ಹೊಸಪೇಟೆ ತಾಲ್ಲೂಕಿನ ಸ್ವಚ್ಛ ವಾಹಿನಿ ಮೂಲಕ ಸಹ ಜಾಥಾ ನಡೆಯಿತು. ಸಿಇಓ ಅವರು ಜಾತ್ರೆಯಲ್ಲಿದ್ದ ಅಂಗಡಿಗಳಿಗೆ ತೆರಳಿ ಮತದಾನದ ಕುರಿತು ಜಾಗೃತಿ ಮೂಡಿಸಿದರು. ಮತದಾನದ ಕುರಿತು ಘೋಷಣೆಗಳನ್ನು ಹಾಕಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಅನೇಕ ಜಾಗೃತಿ ಘೋಷ ವಾಕ್ಯಗಳನ್ನು ಒಳಗೊಂಡ ಫ್ಲೆಕ್ಸ್ ಬ್ಯಾನರ್‌ಗಳನ್ನು ಹಿಡಿದು ಜಾತ್ರೆಯ ಬೀದಿಗಳಲ್ಲಿ ವಿವಿಧ ಅಂಗಡಿ ಮುಂಗಟ್ಟುಗಳಿಗೆ ತೆರಳಿ ರಾಜ್ಯದ, ಜಿಲ್ಲೆಯ ಹಾಗೂ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾರ್ವಜನಿಕರಿಗೆ ಮತ್ತು ವರ್ತಕರಿಗೆ ನೈತಿಕ ಮತದಾನ ಹಾಗೂ ಕಡ್ಡಾಯ ಮತದಾನ ಕುರಿತು ಕರಪತ್ರಗಳನ್ನು ಹಂಚುವ ಮೂಲಕ ಜಾಗೃತಿ ಮೂಡಿಸಲಾಯಿತು.ಈ ವೇಳೆ ಸಿಇಓ ಅವರು ಮಾತನಾಡಿ, ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ಪ್ರಯುಕ್ತ ಬಳ್ಳಾರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಜಯನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮೇ 07ರಂದು ಮತದಾನ ನಡೆಯಲಿದೆ. ಮತದಾನ ಪ್ರಮಾಣವನ್ನು ಹೆಚ್ಚಿಸುವ ಪ್ರಯುಕ್ತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಜೀವಿನಿ- ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರುಗಳಿಂದ, ನರೇಗಾ ಕೂಲಿ ಕಾರ್ಮಿಕರಿಂದ, ಗ್ರಾಮಸ್ಥರಿಂದ, ಗ್ರಾಮೀಣ ಮಟ್ಟದ ಎಲ್ಲಾ ಇಲಾಖೆಗಳಿಂದ ಸಾರ್ವಜನಿ ಕರಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು. ನಮ್ಮ ದೇಶ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಪ್ರಕ್ರಿಯೆ ಬಹಳ ಮಹತ್ವ ಹೊಂದಿದೆ. ಪ್ರತಿಯೊಬ್ಬ ಮತದಾರರು ಮತದಾನದಲ್ಲಿ ಪಾಲ್ಗೊಂಡು ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಪಡಿಸುವುದು ಅವಶ್ಯವಿದೆ. ಮತದಾನ ನಮ್ಮ ಹಕ್ಕು ಹಾಗೂ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ನಮ್ಮ ಮತ ಮಾರಾಟಕ್ಕಿಲ್ಲ ಎಂಬ ಘೋಷವಾಕ್ಯದೊಂದಿಗೆ ಯಾವುದೇ ಮತದಾರರು, ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೇ ತಪ್ಪದೇ ಮತ ಚಲಾಯಿಸಿದಲ್ಲಿ ಪ್ರಜಾಪ್ರಭುತ್ವದ ಘನತೆಯನ್ನು ಎತ್ತಿ ಹಿಡಿದಂತಾಗುತ್ತದೆ ಎಂದರು. ಯಾರು ಸಹ ಮತದಾನದಿಂದ ಹೊರಗುಳಿಯಬಾರದು, ಮತದಾನದ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರು ತಪ್ಪದೇ ಭಾಗವಹಿಸಿ ಮತ ಚಲಾಯಿಸುವುದರಿಂದ ಪ್ರಜಾಪ್ರಭುತ್ವದ ಬುನಾದಿಗೆ ಹಾಗು ದೇಶದ ಸಮಗ್ರ ಅಭಿವೃದ್ಧಿಗಾಗಿ ಹಾಗು ದೇಶದ ಒಳಿತಿಗಾಗಿ ಭದ್ರ ಬುನಾದಿಯಾಗುತ್ತದೆ ಎಂದರು.ಮತದಾನ ಮಾಡಲು ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಮೇ 07ರಂದು ತಪ್ಪದೇ ಮತಗಟ್ಟೆಯ ಕೇಂದ್ರಕ್ಕೆ ತೆರಳಿ ಅಮೂಲ್ಯವಾದ ಮತ ಚಲಾಯಿಸಬೇಕೆಂದು ಸಾರ್ವಜನಿಕರಲ್ಲಿ ಸಿಇಓ ಅವರು ಮನವಿ ಮಾಡಿದರು.ಈ ವೇಳೆ ವಿಜಯನಗರ ಜಿಲ್ಲೆಯ ಜಾನಪದ ಕಲಾವಿದರು ಹಾಗೂ ಜಿಲ್ಲಾ ಚುನಾವಣಾ ರಾಯಭಾರಿಗಳಾದ ಕಾರಮಂಚಪ್ಪ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಅಶೋಕ್ ಜಿ.ತೋಟದ್, ಸಹಾಯಕ ಯೋಜನಾ ಅಧಿಕಾರಿ ಲಕ್ಷಿಕಾಂತ್,ಯೋಜನಾ ಅಂದಾಜು ಮೌಲ್ಯಮಾಪನ ಅಧಿಕಾರಿ ಪತ್ರಿಬಸಪ್ಪ, ಹೊಸಪೇಟೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಹರೀಶ್‌ಆರ್.,ಸಹಾಯಕ ನಿರ್ದೇಶಕರಾದ ಉಮೇಶ್,ಪಿಡಿಓ ಗಂಗಾಧರ್,ಎನ್‌ಆರ್‌ಎಲ್ ಎಮ್‌ನ ಪ್ರಸನ್ನಕುಮಾರ್,ಜಿಲ್ಲಾ ಐಇಸಿ ಫಾಜೀಲ್ ಅಹ್ಮದ್, ತಾಲೂಕು ಐಇಸಿ ನಾಗರಾಜ್, ಟಿಪಿಎಂ ಕೊಟ್ರೇಶ್ ಹಾಗೂ ವಿವಿಧ ವಿಭಾಗದ ಸಿಬ್ಬಂದಿ ಹಾಗೂ ಜಿಲ್ಲಾ ಹಾಗು ತಾಲೂಕು ಪಂಚಾಯತ್ ಗ್ರಾಪಂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಸ್ವದೇಶಿ ದರ್ಶನ್ 2.0 ಯೋಜನೆಯಡಿ ಹಂಪಿ ಅಭಿವೃದ್ಧಿ

# ಯೋಜನೆಗಳಿಗೆ ವಿಸ್ತೃತ ಪರಿಕಲ್ಪನಾ ವರದಿ ತಯಾರಿ ಚರ್ಚೆ



ಹೊಸಪೇಟೆ (ವಿಜಯನಗರ ಜಿಲ್ಲೆ) ಏಪ್ರೀಲ್ 23: ವಿಶ್ವ ಪಾರಂಪರಿಕ ತಾಣವಾದ ಹಂಪಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಪ್ಯಾಕೇಜ್-2ರಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳುವ ನಿಮಿತ್ತ ವಿಸ್ತೃತ ಪರಿಕಲ್ಪನಾ ವರದಿ ತಯಾರಿಸುವುದರ ಬಗ್ಗೆ ಚರ್ಚಿಸಲು ಮಹತ್ವದ ಹಂಪಿ ಡೆಸ್ಟಿನೇಷನ್ ಮ್ಯಾನೇಜಮೆಂಟ್ ಸಮಿತಿ ಸಭೆಯು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರೀಲ್ 23ರಂದು ನಡೆಯಿತು.ಡೆಸ್ಟಿನೇಷನ್ ಮ್ಯಾನೇಜಮೆಂಟ್ ಕಮೀಟಿ ಹಂಪಿಯ ಸದಸ್ಯರು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ನಗರಸಭೆ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಆಯುಕ್ತರು, ಲೋಕೋಪಯೋಗಿ ಇಲಾಖೆಯ ಅಭಿಯಂತರರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಪುರಾತತ್ವ ಅಧೀಕ್ಷ ಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪುರಾತತ್ವ ಪರಂಪರೆಯ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು, ಧರೋಜಿ ಕರಡಿದಾಮ ಮತ್ತು ಅಟಲ್ ಬಿಹಾರಿ ವಾಜಪೇಯಿ ಜೂಯಾಲಾಜಿಕಲ್ ಪಾರ್ಕನ ವಲಯ ಅರಣ್ಯಾಧಿಕಾರಿಗಳು, ಹೊಸಪೇಟೆ ತುಂಗಭದ್ರಾ ಬೋರ್ಡನ ಕಾರ್ಯದರ್ಶಿಗಳು, ಜಿಲ್ಲಾ ಕೌಲಶಲ್ಯಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕೈಗಾರಿಕಾ ಕೇಂದ್ರ, ಪುರಸಭೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಹಂಪಿ ಹೊಸಪೇಟೆ ಹೊಟೆಲ್ ಅಸೋಸಿಯೇಶನ್ ಅಧ್ಯಕ್ಷರು, ಹೊಟೆಲ್ ಪ್ರಿಯದರ್ಶಿನಿ ಮತ್ತು ಹೊಟೆಲ್ ಮಲ್ಲಿಗೆಯ ಮಾಲೀಕರು ಸೇರಿದಂತೆ ಇನ್ನಿತರರು ಇರುವ ಸಮಿತಿಯ ಸಭೆಯಲ್ಲಿ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಹಂಪಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಕೇಂದ್ರ ಪುರಸ್ಕೃತ ಸ್ವದೇಶ ದರ್ಶನ್ 2.0 ಯೋಜನೆಯಡಿ ಹಂಪಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಂಪಿ ಡೆಸ್ಟಿನೇಶನ್ ಮ್ಯಾನೇಜಮೆಂಟ್ ಸಮಿತಿಯನ್ನು ಸರ್ಕಾರದ ಆದೇಶದಂತೆ ಈಗಾಗಲೇ ರಚಿಸಲಾಗಿರುತ್ತದೆ. ಪ್ರಾಕೃತಿಕ ಸೊಬಗಿನಿಂದಾಗಿ ಪ್ರತಿಯೊಬ್ಬರನ್ನು ತನ್ನತ್ತ ಸೆಳೆಯುವ ಹಂಪಿಗೆ ಜಾಗತಿಕವಾಗಿ ತನ್ನದೇ ವಿಶೇಷತೆ ಮತ್ತು ಮಾನ್ಯತೆ ಇದೆ.ಧೂಳು ಮುಕ್ತ ಹಂಪಿಯನ್ನಾಗಿ ಮಾಡಬೇಕು ಎಂಬುದು ನಮ್ಮ ಬಹುಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.ಗೆಜ್ಜಲು ಮಂಟಪದಿಂದ ವಿಜಯವಿಠ್ಠಲ್ ದೇವಾಲಯದವರೆಗೆ, ರಾಣಿಸ್ನಾನ ಗೃಹದಿಂದ ನೆಲಸ್ಥರದ ಶಿವ ದೇವಾಲಯದವರೆಗೆ, ಉಗ್ರ ನರಸಿಂಹ್ ಪಾರ್ಕಿಂಗ್ ಹತ್ತಿರ, ಪುರಂದರದಾಸ ಮಂಟಪದಿಂದ ಸೀತೆ ಸೆರಗು (ಸುಗ್ರೀವ್ ಗುಹೆ)ವರೆಗೆ, ಗುತ್ತಿ ಪಾರ್ಕಿಂಗ್ ಏರಿಯಾ, ಸರಸ್ವತಿ ದೇವಸ್ಥಾನ ರಸ್ತೆ, ವಿರುಪಾಕ್ಷ ದೇವಸ್ಥಾನ ರಸ್ತೆ, ಕಮಲ್‌ಮಹಲ್‌ದಿಂದ ಅಚ್ಯುತರಾಯ್ ರಸ್ತೆವರೆಗೆ, ಶೃಂಗದ ಹೆಬ್ಬಾಗಿಲಿನಿಂದ ಪಾನ್ ಸೂಪರ್ ಬಜಾರ್ ರಸ್ತೆವರೆಗಿನ ಎಲ್ಲ ಮಣ್ಣಿನ ರಸ್ತೆಗಳಿಗೆ ಹಾಸು ಬಂಡೆ ಹಾಕುವುದು, ಸ್ಥಳೀಯರಿಗೆ ಮೂಲಭೂತ ಸೌಕರ್ಯ ಒದಗಿಸುವುದು, ಎಲೆಕ್ಟ್ರಿಕಲ್ ವಾಹನಗಳ ನಿಲುಗಡೆಗೆ ಹಂಪಿಯ ಕೃಷ್ಣ ಪಾರ್ಕಿಂಗ್ ಮತ್ತು ಚಂದ್ರಶೇಖರ ಏರಿಯಾ ಅಭಿವೃದ್ಧಿ, ಪ್ರವಾಸಿಗರಿಗೆ ಮಾಹಿತಿ ಒದಗಿಸಲು ಕ್ಯೂಆರ್ ಕೋಡ್, ಹವಾಮಾದಿಂದಲೇ ಕಡಿಮೆ ದರದಲ್ಲಿ ಹಂಪಿ ಬೈಸೈಟ್, ವಿಜಯವಿಠ್ಠಲ್ ದೇವಸ್ಥಾನದ ಹತ್ತಿರ ಕುಡಿಯುವ ನೀರಿನ ಮೊಬೈಲ್ ವ್ಯಾನ್ ಸೇರಿದಂತೆ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಪ್ಯಾಕೇಜ್-2ರಲ್ಲಿ ವಿವಿಧ ಯೋಜನೆಗಳ ವಿಸ್ತೃತ ಪರಿಕಲ್ಪನಾ ವರದಿ ತಯಾರಿಸುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಪ್ರವಾಸಿ ಮಾರ್ಗದರ್ಶಿಗಳು ಸಹ ಇದ್ದರು.

## ಏ 26 ಕ್ಕೆ ರಾಹುಲ್ ಗಾಂಧಿ ಬಹಿರಂಗ

# ಸಮಾವೇಶಕ್ಕೆ ಬಳ್ಳಾರಿಗೆ ಆಗಮನ-ಸಚಿವ ನಾಗೇಂದ್ರ



ಬಳ್ಳಾರಿ ಏ-: ಲೋಕಸಭಾ ಚುನಾವಣೆ ಅಂಗವಾಗಿ ಅಭ್ಯರ್ಥಿ ತುಕಾರಾಂ ಪರ ರಾಹುಲ್ ಗಾಂಧಿ ಬಹಿರಂಗ ಪ್ರಚಾರಕ್ಕೆ ಇದೆ ತಿಂಗಳ 26 ರಂದು ಸಂಜೆ 4 ಗಂಟೆಗೆ ಬಳ್ಳಾರಿಗೆ ಬಹಿರಂಗ ಸಮಾವೇಶಕ್ಕೆ ಆಗಮಿಸುತ್ತಾರೆ ಎಂದು ಸಚಿವ ನಾಗೇಂದ್ರ ಹೇಳಿದರು. ನಗರದ ರಾಯಲ್‌ಪೋರ್ಟ್ ಹೋಟೆಲ್‌ನಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದ ಅವರು ರಾಹುಲ್ ಗಾಂಧಿ ಮೂರು ಕ್ಷೇತ್ರಗಳಾದ ಕೊಪ್ಪಳ, ಬಳ್ಳಾರಿ ರಾಯಚೂರು ಗುರಿಯಾಗಿಟ್ಟುಕೊಂಡು ಬಳ್ಳಾರಿ ನಗರದ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮತದಾರರಿಗೆ ಸಂದೇಶ ರವಾನೆ ಮಾಡುವ ಮುಖೇನ ಅಭ್ಯರ್ಥಿಗಳ ಪರ ಮತಯಾಚನೆ ಮಾಡುತ್ತಾರೆ ಎಂದು ಸ್ಪಷ್ಟ ಪಡಿಸಿದರು.ಎಐಸಿಸಿ ಪ್ರಕಾರ ವೇದಿಕೆಯ ಮೇಲೆ ಯಾರು ಇರಬೇಕು ಎಂಬುದು ತೀರ್ಮಾನ ಮಾಡುತ್ತೇವೆ. ಹಾಗೆಯೇ ಬಹಿರಂಗ ಸಭೆಗೆ ಮಲ್ಲಿಕಾರ್ಜುನ ಖರ್ಗೆ ಸಿಎಂ ಸಿದ್ದರಾಮಯ್ಯ ಉಪ ಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ್ ಸರ್ಕಾರದ ಪ್ರಮುಖ ಸಚಿವರು ಸ್ಥಳೀಯ ಕೆಲವು ಪ್ರಮುಖ ಮುಖಂಡರನ್ನೊಳಗೊಂಡ ವ್ಯಕ್ತಿಗಳು ವೇದಿಕೆಯಲ್ಲಿ ಇರುತ್ತಾರೆ ಎಂದು ಮಾಹಿತಿ ನೀಡಿದರು. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಎಲ್ಲೆಲ್ಲಿ ಬಂದು ಹೋಗಿದ್ದಾರೆ ಅಲ್ಲಿ ನಮ್ಮ ಶಾಸಕರು ಗೆಲುವು ಸಾಧಿಸಿದ್ದು, ಅವರು ಬರುವ ಹಿನ್ನೆಲೆಯಲ್ಲಿ ನಮ್ಮ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹುಮ್ಮಸ್ಸು ಹೆಚ್ಚು ಮಾಡಿದೆ ಎಂದರು. ಜಿಲ್ಲೆಯ ಶಾಸಕರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಭದ್ರ ಕೋಟೆ ಉಳಿಸಿಕೊಳ್ಳಲು ಈ ಬಾರಿ ಕೋಮು ವಾದಿ ಬಿಜೆಪಿ ಪಕ್ಷವನ್ನು ಕಿತ್ತೊಗೆಯಲು ಪಣ ತೊಟ್ಟಿದ್ದಾರೆ. ಉತ್ತರ ಕರ್ನಾಟಕಕ್ಕೆ ಬಳ್ಳಾರಿ ಹೆಬ್ಬಾಗಿಲು ಅದಕ್ಕಾಗಿ ಇಲ್ಲಿ ಬಹಿರಂಗ ಸಮಾವೇಶದಲ್ಲಿ ಲೋಕಸಭಾ ಅಭ್ಯರ್ಥಿಗಳು ಬಾಗಿಯಾಗುತ್ತಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಬಂದರೆ ಗ್ಯಾರೆಂಟಿ ಇಡೀ ದೇಶಕ್ಕೆ ಕೊಡುತ್ತವೆ.ಹಾಗೆಯೇ ಮೊದಲು ಗುಜರಾತ್ ಮಡಾಲ್ ಎನ್ನುತ್ತಿದ್ದರು ಈಗ ಐದು ಗ್ಯಾರೆಂಟಿ ಪಡೆದ ಮೇಲೆ ಮೋದಿ ಕೂಡ ಗ್ಯಾರೆಂಟಿ ಎಂಬ ಪದಬಳಕೆ ಮಾಡಲು ಮುಂದಾಗಿದ್ದು, ದೇಶದಲ್ಲಿ ಕರ್ನಾಟಕದ ಮಾದರಿ ಎನ್ನುತ್ತಿದೆ.ಈಗಿರುವಾಗ ತುಕಾರಾಂ ಗೆಲುವು ಅಷ್ಟೇ ಸ್ಪಷ್ಟ ಎಂದರು.ಬಾಕ್ಸ್ ಐಟಮ್......ಅವತ್ತಿನ ಸಂದೇಶ ಇಂದಿರಾಗಾಂಧಿ ನುಡಿದಂತೆ ನಡೆದಿದ್ದು ಅದನ್ನು ಜನರಿಗೆ ತಿಳಿಸಲು ರಾಹುಲ್ ಗಾಂಧಿ ಬರುತ್ತಿದ್ದಾರೆ. ಉತ್ತರ ಕರ್ನಾಟಕಕ್ಕೆ ಒಂದು ಸಂದೇಶ ನೀಡುವ ಕಾರ್ಯಕ್ರಮ ಇದಾಗಿರುತ್ತದೆ. ನೀತಿ ಆಯೋಗದ ಪ್ರಕಾರ 85% ಅನುದಾನ ಕೊಡಬೇಕು.ಮತ್ತು ಜಿಎಸ್ಟಿಯಲ್ಲಿ ಅನ್ಯಾಯ ಆಗಿದೆ ಹಾಗೂ ಬಳ್ಳಾರಿ ಜಿನ್ಸ್ ಎಂದು ಹೆಸರು ಬರುವ ಹಾಗೆ ಮಾಡುತ್ತೇವೆ ಎಂದು ತುಕಾರಾಂ ಅಭ್ಯರ್ಥಿ ಹೇಳಿದರು.ಈ ಸಂದರ್ಭದಲ್ಲಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮೇಯರ್ ಶ್ವೇತ ನಗಮ ಮಂಡಳಿ ಅದ್ಯಕ್ಷ ಮುಂಡರಗಿ ನಾಗರಾಜ್, ಮಾಜಿ ಎಂಎಲ್ಸಿ ಕೆ.ಎಸ್.ಎಲ್.ಸ್ವಾಮಿ. ಬುಡಾ ಅದ್ಯಕ್ಷ ಜೆ.ಎಸ್. ಆಂಜಿನೇಯುಲು, ಮಾಜಿ ಮೇಯರ್ ರಾಜೇಶ್ವರಿ,ಮಹಾ ನಗರ ಪಾಲಿಕೆ ಸದಸ್ಯರು ಕಾಂಗ್ರೆಸಿನಹಿರಿಯ ಮುಖಂಡರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಕ್ಕಮಹಾದೇವಿ ಜಯಂತ್ಯೋತ್ಸವ ಮತ್ತು

# ಮಹಿಳಾ ದಿನಾಚರಣೆ ಅದ್ದೂರಿಯಾಗಿ ಆಚರಣೆ



ಬಳ್ಳಾರಿ ಏ-: ಬಳ್ಳಾರಿಯ ಬಸವೇಶ್ವರ ನಗರದ ರಾಷ್ಟ್ರೀಯ ಬಸವದಳ ಮತ್ತು ಅಕ್ಕನಾಗಲಾಂಬಿಕಾ ಮಹಿಳಾ ಗಣದ ಸಹಭಾಗಿತ್ವದಲ್ಲಿ ದಿನಾಂಕ ಏ 23 ರಂದು ಮಂಗಳವಾರ ಸಾಯಂಕಾಲ ವೀರವಿರಾಗಿಣಿ ಅಕ್ಕಮಹಾದೇವಿ ತಾಯಿಯವರ ಜಯಂತ್ಯೋತ್ಸವ ಮತ್ತು ಮಹಿಳಾ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಮಾಜಸೇವೆಯ ವಿಭಾಗದಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಶರಣೆ ಡಾ.ಗೌರಿ ಮಾಣಿಕ್ ಮಾನಸ್ ಅವರು ಉದ್ಘಾಟನಾ ಭಾಷಣವನ್ನು ಮಾಡುತ್ತಾ ಅಕ್ಕ ಆಧ್ಯಾತ್ಮ ಸರಸಿಯಲ್ಲಿ ಅರಳಿದ ಬೆಳ್ದಾವರೆ, ಮಹಾದೇವಿಯಕ್ಕನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಸ್ವತಂತ್ರ್ಯ ಸಾಧನೆಯ, ಪರಮಾರ್ಥ ಸಾಧನೆಯ ಒಂದು ಮಹಾ ಪ್ರಕರಣ ಎಂದು ಹೇಳಿದರು ಮಹಿಳಾ ದಿನಾಚರಣೆಗಳನ್ನು ಆಚರಿಸುವ ಉದ್ದೇಶವನ್ನು ತಿಳಿಸುತ್ತಾ ಮಹಿಳೆ ಸ್ವಾವಲಂಬಿಯಾಗಿ ಬದುಕಲು ಇರುವ ಸರ್ಕಾರದ ಯೋಜನೆಗಳ ಬಗ್ಗೆ ಮಹಿಳೆಯರಿಗೆ ವಿವರಿಸಿ, ಅವುಗಳ ಪ್ರಯೋಜನ ಪಡೆಯುವಂತೆ ತಿಳಿಸಿದರು. ನಂತರ ಅಕ್ಕನಾಗಲಾಂಬಿಕಾ ಮಹಿಳಾ ಗಣದ ಅಧ್ಯಕ್ಷರಾದಂಥ ಶರಣೆ ಜಿ.ಎಸ್.ಸರ್ವಮಂಗಳಾ ಅವರು ಮಾತನಾಡಿ ಅಕ್ಕನ ಆದರ್ಶಗಳ ಬಗ್ಗೆ ವಿವರಿಸಿ, ಮಹಿಳೆ ಸಿಕ್ಕಿರುವ ಸ್ವತಂತ್ರ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕೇ ಹೊರತು ಸ್ವೇಚ್ಛಾಚಾರವಾಗಿ ಬಳಸುವುದು ಬೇಡ ಎಂದು ತಿಳಿಸಿದರು. ಮತ್ತು ಅಕ್ಕನಾಗಲಾಂಬಿಕಾ ಮಹಿಳಾ ಗಣದ ಕಾರ್ಯವೈಖರಿಯನ್ನು ವಿವರಿಸಿದರು.

ಮಹಿಳಾ ದಿನದ ಪ್ರಯುಕ್ತ, ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು ನಗರದ ಸ್ವಾಸ್ಥ್ಯವನ್ನು ಕಾಪಾಡುವ ಆರು ಜನ ಮಹಿಳಾ ಪೌರ ಕಾರ್ಮಿಕರನ್ನು ಆದರದಿಂದ ಸನ್ಮಾನಿಸಲಾಯಿತು . ಮಹಿಳಾ ಗಣದ ಕಾರ್ಯದರ್ಶಿಯಾದಂಥ ಶರಣೆ ಸುಜಾತ ರವಿಶಂಕರ್ ಅವರು ಮಾತನಾಡಿ ಪೌರ ಕಾರ್ಮಿಕರ ಅಪರಿಮಿತ ಸೇವೆಯನ್ನು ಶ್ಲಾಘಿಸಿದರು. ನಂತರ ಅಲ್ಲಂ ಸುಮಂಗಳಮ್ಮ ಮಹಿಳಾ ವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದಂಥ ಶರಣೆ ಕಾತ್ಯಾಯಿನ ಮರಿದೇವಯ್ಯ ಅವರು ಮತ್ತು ನಗರಸಭೆಯ ಸದಸ್ಯರಾದಂಥ ಶರಣೆ ಸುರೇಖ ಮಲ್ಲನ ಗೌಡ ಅವರೂ ಮಾತನಾಡಿ ಮಹಿಳೆಯರಿಗೆ ಹಿತವಚನಗಳನ್ನು ಹೇಳಿದರು. ಶರಣೆ ಡಾ. ರೇಣುಕಾ ಮಂಜುನಾಥ್ ಅವರೂ ವೇದಿಕೆಯ ಮೇಲೆ ಆಸೀನರಾಗಿದ್ದರು. ನಂತರ ಶರಣೆ ಡಾ. ವೀಣಾ ಅವರಿಂದ ನೃತ್ಯ ಕಾರ್ಯಕ್ರಮ ನಡೆಯಿತು ಹಾಗೂ ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ವಚನ ಗಾಯನ, ಶರಣರ ಕುರಿತ ಭಾಷಣ ಮತ್ತು ಏಕ್ ಮಿನಟ್ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ರಾಷ್ಟ್ರೀಯ ಬಸವದಳದ ಹಿರಿಯ ಸದಸ್ಯೆ ಶರಣೆ ವಚನಶ್ರೀ ವೇದಿಕೆಯಲ್ಲಿ ಆಸೀನರಾಗಿದ್ದರು ಮತ್ತು ಗಣದ ಸದಸ್ಯೆಯರಾದಂಥ ಉಮಾ ಮಲ್ಲಿಕಾರ್ಜುನ, ಸವಿತಾ ಸತೀಶ್ ಬಾಬು, ಶೈಲಾ ನಾಡಗೌಡ, ಉಷಾ ತಿಪ್ಪೇಸ್ವಾಮಿ, ಉಷಾ ಮೋದಿಯ ವರು ಹಾಜರಿದ್ದರು. ರಾಷ್ಟ್ರೀಯ ಬಸವದಳದ ಹಾಗೂ ಅಕ್ಕನಾಗಲಾ ಂಬಿಕಾ ಮಹಿಳಾ ಗಣದ ನೂರಾರು ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಮೂಡಲಗಿಯಲ್ಲಿ ವಿವಿಧಡೆ ಶೃದ್ಧಾ ಭಕ್ತಿಯಿಂದ ಹನುಮ ಜಯಂತಿ ಆಚರಣೆ




ಮೂಡಲಗಿ: ಪಟ್ಟಣದಲ್ಲಿ ಮಂಗಳವಾರದಂದು ಈರಣ್ಣ ನಗರದ (ಕೆಇಬಿ ಪ್ಲಾಟ), ಲಕ್ಷ್ಮೀ ನಗರ ಹಾಗೂ ಗಾಂಧಿ ವೃತದ ಬಳಿಯ ಹನಮಂತ ದೇವಸ್ಥಾನದಲ್ಲಿ ಹನುಮ ಜಯಂತಿಯನ್ನು ಶೃದ್ಧಾ ಭಕ್ತಿಯಂದ ಆಚರಿಸಿದರು ಅನ್ನಪ್ರಸಾದ ನೆರವೇರಿಸಿದರು.

ಲಕ್ಷ್ಮೀ ನಗರದ ಹನುಮಂತ ದೇವಸ್ಥಾನದಲ್ಲಿ ಅರ್ಚಕ ಗೋಪಾಲ ಭಸ್ಮೆ ಅವರು ಹನುಮಂತ ಮೂರ್ತಿ ಅಭಿಷೇಕ, ವಿಶೇಷ ಪೂಜೆ, ಅಲಂಕಾರ ನೆರವೇರಿಸಿ ಪೂಜೆಸಲ್ಲಿಸಿದರು. ಮಹಿಳೆಯರು ವಿಧಿ ವಿಧಾನಗಳೊಂದೆ ಹನುಮನಿಗೆ ತೊಟ್ಟಿಲೋತ್ಸವ ನೆರವೇರಿಸಿ ನಾಮಕರಣ ಮಾಡಿದರು ಹಾಗೂ ಪಂಡಿತ ರಾಘವೇಂದ್ರ ಆಚಾರ್ಯ ತೆಗ್ಗಿ ಅವರು ಪವಮಾನ ಹೋಮ ನೆರವೇರಿಸಿ ಮಾತನಾಡಿ, ಶೃದ್ಧಾ ಭಕ್ತಿಯಿಂದ ಹನುಮಂತನ ಆರಾಧನೆಯಿಂದ ಸುಖ, ಶಾಂತಿ, ನೆಮ್ಮದಿಯೊಂದಿಗೆ ಸಕಲ ಸೌಭಾಗ್ಯದೊರೆಯುವುದು ಎಂದ ಅವರು ಉತ್ತಮ ಆರೋಗ್ಯಕ್ಕಾಗಿ ಹಾಗೂ ಮಕ್ಕಳು ಸಂಸ್ಕಾರವಂತರಾಗಲ್ಲು ಹನುಮನ ಆರಾಧನೆ ಅವಶ್ಯಕವಾಗಿದೆ ಎಂದರು. ನಂತರ ಅನ್ನಪ್ರಸಾದ ಜರುಗಿತು.

ಈರಣ್ಣ ನಗರದ ಕೆಇಬಿ ಪ್ಲಾಟದಲ್ಲಿ ಜರುಗಿದ ಹನುಮ ಜಯಂತಿಯಲ್ಲಿ ಶಾಂತಾ ಗಡಾದ, ಶೋಭಾ ಬಾಲರಡ್ಡಿ, ರೇಖಾ ಬಸಳಿಗುಂದಿ, ಗೌರವ್ವ ಬನ್ನೂರ, ಭೀಮಪ್ಪ ಗಡಾದ, ಬಸವರಾಜ ಕಬ್ಬೂರ, ರಮೇಶ ಪಾಟೀಲ, ವೆಂಕಟೇಶ ಬಾಲರಡ್ಡಿ, ಶ್ರೀಶೈಲ್ ಜೈನಾಪೂರ, ಸುಭಾಸ ಬನ್ನೂರ, ಯಲ್ಲಪ್ಪ ಸಣ್ಣಕ್ಕಿ, ಬಸವರಾಜ ಹುಚ್ಚನ್ನವರ, ಭೀಮಶಿ ಅವರಾದಿ, ಶಿವಬಸು ಮೆಳವಂಕಿ, ಯಲ್ಲಪ್ಪ ಮಾನಕಪ್ಪಗೋಳ ಇದ್ದರು.

## ಮೂಡಲಗಿ: ತಾಲ್ಲೂಕಾಡಳಿತದಿಂದ ಬೈಕ ರ್‍ಯಾಲಿ ಮೂಲಕ ಮತದಾನ ಜಾಗೃತಿ



ಮೂಡಲಗಿ: ಪಟ್ಟಣದಲ್ಲಿ ತಾಲ್ಲೂಕಾಡಳಿತ ಹಾಗೂ ಅರಭಾವಿ ಮತ ಕ್ಷೇತ್ರದ ಸ್ವೀಪ್ ಸಮಿತಿ ವತಿಯಿಂದ ಬೈಕ್ ರ್‍ಯಾಲಿ ಮೂಲಕ ಮೂಡಲಗಿಯಲ್ಲಿ ಮತದಾನದ ಜಾಗೃತಿ ಅರಿವು ಮೂಡಿಸಿದರು.

ತಹಶೀಲ್ದಾರ ಕಚೇರಿಯ ಆವರಣದಲ್ಲಿ ಬೈಕ್ ರ್‍ಯಾಲಿಗೆ ಸ್ವೀಪ್ ಸಮಿತಿ ಅಧ್ಯಕ್ಷ ನವೀನಕುಮಾರ ಕಟ್ಟಿಮನ ಹಾಗೂ ತಹಶೀಲ್ದಾರ ಬಿ.ಎಸ್.ಕಡಕಬಾವಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದ ಬೈಕ್ ರ್‍ಯಾಲಿಯೂ ಕಾಲೇಜು ರಸ್ತೆ ಮತ್ತು ಪಟ್ಟಣದ ಮುಖ್ಯ ರಸ್ತೆ ಮುಖಾಂತ ಕಲ್ಮೇಶ್ವರ ವೃತ್ತ, ಚನ್ನಮ್ಮ ವೃತ್ತ, ಕರೇಮ್ಮಾದೇವಿ ವೃತ್ತ, ಬಸವೇಶ್ವರ ವೃತ್ತ, ಸಂಗಪ್ಪಣ್ಣ ವೃತ್ತ ಮೂಲಕ ಮರಳಿ ಕಲ್ಮೇಶ್ವರ ವೃತ್ತದವರಗೆ ಜರುಗಿತು.

ಕಲ್ಮೇಶ್ವರ ವೃತ್ತದಲ್ಲಿ ಸ್ವೀಪ್ ಸಮಿತಿ ಅಧ್ಯಕ್ಷ ನವೀನಕುಮಾರ ಕಟ್ಟಿಮನ ಮಾತನಾಡಿ, ಅರಭಾವಿ ಕ್ಷೇತ್ರದಲ್ಲಿ ಎಲ್ಲಕಡೆ ವಿವಿಧ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲ್ಲಾಗುತ್ತಿದೆ, ಮೇ.7ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಮತದಾರರು ತಮ್ಮ ಮತವನ್ನು ಕಡ್ಡಾಯವಾಗಿ ಮತದಾನ ಮಾಡಿ ಸಂವಿಧಾನಕವಾಗಿ ಕೊಟ್ಟಿರುವ ಹಕ್ಕನ್ನು ಸಮಾಜಿಕವಾಗಿ ಜವಾಬ್ದಾರಿಯಿರುವದರಿಂದ ಮತದಾನ ಪ್ರಜಾಪ್ರಭುತ್ವ ಹಬ್ಬವನ್ನು ಯಶಸ್ವಿಗೋಳಿಸಿ ಒಳ್ಳೆಯ ಸರಕಾರ ರಚಣೆಗೆ ಕಾರಣರಾಗಬೇಕೆಂದರು.ತಹಶೀಲ್ದಾರ ಬಿ.ಎಸ್.ಕಡಕಭಾಂವಿ ಮಾತನಾಡಿ, ಅರಭಾವಿ ಮತ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಲು ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಬೈಕ್ ಜಾಥಾದಲ್ಲಿ ಬಿಇಓ ಅಜೀತ ಮನ್ನಿಕೇರಿ, ಸಿಡಿಪಿಓ ಯಲ್ಲಪ್ಪ ಗದಾಡಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು, ಪಿಡಿಓ ಹಾಗೂ ತಾಪಂ, ತಹಶೀಲ್ದಾರ ಕಛೇರಿಯ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದರು.